# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶೆಟ್ಟಿಹಳ್ಳಿ ಉಪವಿಭಾಗ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, ರವೀಂದ್ರನಗರ, ಶೆಟ್ಟಿಹಳ್ಳಿ ಕ್ರಾಸ್.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ 12 ರಲ್ಲಿ ದಿನಾಂಕ:- 07.11.2020 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ರವಿಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಎ.ಪಿ. ಶಿವಕುಮಾರ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ ಪ್ರವೀಣ್ ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು.
4. ಶ್ರೀ ವೇಣುಗೋಪಾಲ್ ವೈ.ಆರ್, ಸ.ಅ, ಬೆಸ್ಕಾಂ, ಶೆಟ್ಟಿಹಳ್ಳಿ.
5. ಶ್ರೀ ಮಂಜುನಾಥ್, ಸ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಶೆಟ್ಟಿಹಳ್ಳಿ.
6. ಶ್ರೀ ಕುಮಾರಸ್ವಾಮಿ, ಸ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೆ.ಜಿ.ಹಳ್ಳಿ.
7. ಶ್ರೀ ರವಿಚಂದ್ರನ್, ಪೋಲೀಸ್ ಇನ್ಸ್‌ಪೆಕ್ಟರ್, ಗಂಗಮ್ಮನಗುಡಿ ಪೋಲೀಸ್ ಠಾಣೆ.
8. ಶ್ರೀ ಚಂದ್ರಮೋಹನ್, ವಾಟರ್‌ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ,
9. ಶ್ರೀ ಎಂ.ವಿ. ಮಂಜುಗಗನ್, ಕಿ.ಆ.ಪ, ವಾರ್ಡ್ ನಂ.12.
10. ಶ್ರೀ ಲಕ್ಷ್ಮಣ್, ಕರ ವಸೂಲಿಗಾರರು, ವಾರ್ಡ್ ನಂ.12.
11. ಶ್ರೀ ಚಿಕ್ಕಣ್ಣ, ಅರಣ್ಯ ಇಲಾಖೆ, ದಾಸರಹಳ್ಳಿ ವಲಯ
12. ಶ್ರೀ ಸುಮಂತ್ ಆರ್, ಬಿಬಿಎಂಪಿ ಮಾರ್ಷಲ್.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಕಮ್ಮಗೊಂಡನಹಳ್ಳಿ, ಅಬ್ಬಿಗೆರೆ, ಶೆಟ್ಟಿಹಳ್ಳಿಗಳಲ್ಲಿ ನಾಯಿಯ ಸಂಖ್ಯೆಯು ಹೆಚ್ಚಾಗಿದ್ದು, ನಾಯಿಗಳ ಹಾವಳಿಗಳನ್ನು ನಿಯಂತ್ರಿಸಲು ಸಭೆಯಲ್ಲಿದ್ದ ಶ್ರೀಮತಿ ಲಲಿತಮ್ಮನವರು ಕೋರಿರುತ್ತಾರೆ. | ಸದರಿ ಪ್ರದೇಶಗಳಲ್ಲಿ ನಾಯಿಗಳ ಹಾವಳಿಗಳನ್ನು ನಿಯಂತ್ರಿಸಲು ಪಶುಪಾಲನೆ (ದಾಸರಹಳ್ಳಿ) ಬಿಬಿಎಂಪಿ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ನಿರ್ದೇಶಕರು, ಪಶುಪಾಲನೆ (ದಾಸರಹಳ್ಳಿ) ಬಿಬಿಎಂಪಿ |
| 2 | ಅಂಜನಾದ್ರಿ ಬಡಾವಣೆಯಲ್ಲಿ ಮರಗಳ ರೆಂಬೆಗಳು ಬೆಳೆದು ಬೀದಿದೀಪಗಳು ಸರಿಯಾಗಿ ಕಾಣುವುದಿಲ್ಲವೆಂದು ತಿಳಿಸಿ ರೆಂಬೆಗಳನ್ನು ತೆಗೆಯಲು ತಿಳಿಸಿರುತ್ತಾರೆ. | ತುರ್ತಾಗಿ ಬೆಳೆದಿರುವ ರೆಂಬೆಗಳನ್ನು ಗುರುತಿಸಿ ರೆಂಬೆಗಳನ್ನು ಬೇರ್ಪಡಿಸಿ ಕ್ರಮ ಕೈಗೊಳ್ಳಲು ವಲಯ ಅರಣ್ಯಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು. | ವಲಯ ಅರಣ್ಯಾಧಿಕಾರಿಗಳು ದಾಸರಹಳ್ಳಿ ವಲಯ, ಬಿಬಿಎಂಪಿ |
| 3 | ಅಂಜನಾದ್ರಿ ಲೇಔಟ್‌ನಲ್ಲಿ ಆಟೋ ಟಿಪ್ಪರ್‌ಗಳು ತ್ವರಿತಗತಿಯಲ್ಲಿ ಬಂದು | ಅಂಜನಾದ್ರಿ ಲೇಔಟ್‌ನಲ್ಲಿ ಆಟೋ ಟಿಪ್ಪರ್‌ಗಳ ಡ್ರೈವರ್‌ಗಳಿಗೆ ನಿಧಾನಗತಿಯಲ್ಲಿ ಚಲಿಸಿಕೊಂಡು | ಕಾರ್ಯಪಾಲಕ ಅಭಿಯಂತರರು, |

Scanned with CamScanner

| | | | |
|---|---|---|---|
| | ಕಸವನ್ನು ತೆಗೆದುಕೊಳ್ಳದೇ ತುರ್ತಾಗಿ ತೆರಳುತ್ತವೆ ಎಂದು ತಿಳಿಸಿರುತ್ತಾರೆ. | ಮನೆಮನೆ ಕಸವನ್ನು ಸರಿಯಾದ ರೀತಿಯಲ್ಲಿ ಪಡೆಯಲು ಆಟೋ ಟಿಪ್ಪರ್ ಡ್ರೈವರ್ ಮತ್ತು ಹೆಲ್ಪರ್‌ಗಳಿಗೆ ಸೂಚಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಲಯ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಲಯ |
| 4 | ಸದರಿ ವಾರ್ಡ್‌ನಲ್ಲಿ ಶೆಟ್ಟಿಹಳ್ಳಿ ರೈಲ್ವೇಗೇಟ್‌ನಿಂದ ಅಬ್ಬಿಗೆರೆ ಮುಖ್ಯರಸ್ತೆಯವರೆಗೂ ರಸ್ತೆಯು ತುಂಬಾ ಹಾಳಾಗಿದ್ದು, ತುರ್ತಾಗಿ ಕ್ರಮಕೈಗೊಂಡು ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಲು ಕೋರಿದರು. | ಸದರಿ ವಾರ್ಡ್‌ನಲ್ಲಿ ಶೆಟ್ಟಿಹಳ್ಳಿ ರೈಲ್ವೇಗೇಟ್‌ನಿಂದ ಅಬ್ಬಿಗೆರೆ ಮುಖ್ಯರಸ್ತೆಯವರೆಗೂ ರಸ್ತೆಯು ತುಂಬಾ ಹಾಳಾಗಿದ್ದು, ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ, ಬಿಬಿಎಂಪಿ |
| 5 | ವಾರ್ಡ್ ನಂ.12 ರಲ್ಲಿ ಬ್ಲಾಕ್ ಸ್ಪಾಟ್‌ಗಳಿಗೆ ಸಿಸಿಟಿವಿ ಮತ್ತು ನಾಮಫಲಕಗಳನ್ನು ತುರ್ತಾಗಿ ಅಳವಡಿಸಲು ಕೋರಲಾಯಿತು. | ವಾರ್ಡ್ ನಂ.12 ರಲ್ಲಿ ಬ್ಲಾಕ್ ಸ್ಪಾಟ್‌ಗಳಿಗೆ ಸಿಸಿಟಿವಿ ಮತ್ತು ನಾಮಫಲಕಗಳನ್ನು ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ, ಬಿಬಿಎಂಪಿ |
| 6 | ವಾರ್ಡ್ ನಂ.12 ರಲ್ಲಿ ಘನತ್ಯಾಜ್ಯ ವಿಲೇವಾರಿಗೆ ಹೆಚ್ಚುವರಿಯಾಗಿ ಒಂದು ಕಾಂಪ್ಯಾಕ್ಟರ್‌ನ್ನು ನೀಡಬೇಕೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಮಾಸ್ಟ ನೋಡಲ್ ಅಧಿಕಾರಿರವರನ್ನು ಕೋರಿದರು. | ವಾರ್ಡ್ ನಂ.12 ರಲ್ಲಿ ಸುಮಾರು 1,20,000 ಜನಸಂಖ್ಯೆ ಇದ್ದು ಈಗ ಹಾಲಿ ಇರುವ ಮಿಕ್ಸ್‌ಡ್ ವೇಸ್ಟ್ ಕಾಂಪ್ಯಾಕ್ಟರ್‌ನ ಜೊತೆಗೆ ಮತ್ತೊಂದು ಮಿಕ್ಸ್‌ಡ್ ವೇಸ್ಟ್ ಕಾಂಪ್ಯಾಕ್ಟರ್ ಬೇಕಾಗಿದ್ದು, ಕಾಂಪ್ಯಾಕ್ಟರ್ ಅನ್ನು ಪಡೆಯಲು ಕಡತದಲ್ಲಿ ಸಲ್ಲಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಲಯ |

**2) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಾಗೂ ವಾಣಿಜ್ಯ ಸಂಕೀರ್ಣಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ತೆಗದುಕೊಳ್ಳುವುದನ್ನು ಪರಿಶೀಲಿಸುವುದು.
2. ತ್ಯಾಜ್ಯ ವಿಂಗಡಿಸದೆ ನೀಡುವುದು ಕಂಡು ಬಂದರೆ ಅಂತಹವರಿಗೆ ದಂಡ ವಿಧಿಸಲು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡುವುದು.
3. ವಾರ್ಡ್ ನಂ.12 ರಲ್ಲಿರುವ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿದ್ದು, ಸದರಿ ಬ್ಲಾಕ್ ಸ್ಪಾಟ್‌ಗಳಿಗೆ ನಾಮಫಲಕ ಮತ್ತು ಸಿಸಿಟಿವಿಗಳನ್ನು ಅಳವಡಿಸಲು ಅಂದಾಜು ಪಟ್ಟಿಯಲ್ಲಿ ಅನುವು ಮಾಡಿಕೊಂಡಿದ್ದು, ಕೋಡ್ ಆಫ್ ಕಂಡ್ಕಂಟ್ ಮುಗಿದ ನಂತರ ಕ್ರಮಕೈಗೊಳ್ಳಲಾಗುವುದು.
4. ಸಪ್ತಗಿರಿ ಲೇಔಟ್ ಎಂಟ್ರೆನ್ಸ್‌ನಲ್ಲಿ ಕಸ ಸುರಿಯುತ್ತಿರುವುದನ್ನು ತೆಗೆಯಲು ಸೂಚಿಸಲಾಯಿತು.
5. ಶೆಟ್ಟಿಹಳ್ಳಿ ಅರಳಿಮರದಿಂದ ಬಾಬಣ್ಣ ಲೇಔಟ್ ವರೆಗಿನ ರಸ್ತೆಯಲ್ಲಿ ಬಿದ್ದಿರುವ ಕಸವನ್ನು ತುರ್ತಾಗಿ ತೆಗೆಯಲು ಸೂಚಿಸಲಾಯಿತು.

Scanned with CamScanner

3) **ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ಸುಮಾರು 1031 ರಸ್ತೆಗಳಿದ್ದು, ಇದರಲ್ಲಿ ಸುಮಾರು 820 ರಸ್ತೆಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಅಗೆಯಲಾಗಿದ್ದು, ಬಾಕಿ ಇರುವ 211 ರಸ್ತೆಗಳಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಲು ಅನುವು ಮಾಡಿಕೊಳ್ಳಲಾಗಿರುತ್ತದೆ.
2. ಸದರಿ ವಾರ್ಡ್‌ನ ಮುಖ್ಯರಸ್ತೆಗಳನ್ನು ತುರ್ತಾಗಿ ಸಾರ್ವಜನಿಕರು ಸುಗಮವಾಗಿ ಸಂಚಾರಿಸುವಂತೆ ಕ್ರಮವಹಿಸಲು ವಾರ್ಡ್‌ನ ಎಲ್ಲಾ ಅನುದಾನಗಳನ್ನು ಉಪಯೋಗಿಸಿಕೊಂಡು ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

4) **ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರಿನಿಂದ ಮುಳುಗಡೆಯಾಗುತ್ತಿರುವ ಪ್ರದೇಶಗಳ ಸಮಸ್ಯೆ ಬಗ್ಗೆ ಚರ್ಚಿಸುವ ವಿಚಾರ**

1. ಸದರಿ ವಾರ್ಡ್‌ನಲ್ಲಿ ಮಳೆ ನೀರಿನಿಂದ ಮುಳುಗಡೆಯಾಗುವ ಪ್ರದೇಶಗಳಾದ ಆರ್.ಆರ್. ಕಾಲೇಜ್ ಸುತ್ತಮುತ್ತಲಿನ ಪ್ರದೇಶದ ರಸ್ತೆಗಳನ್ನು ತುರ್ತಾಗಿ ಅಭಿವೃದ್ಧಿಪಡಿಸಲು ಸೂಚಿಸಲಾಯಿತು.
2. ಸದರಿ ವಾರ್ಡ್‌ನಲ್ಲಿ ಮಳೆ ನೀರಿನಿಂದ ಮುಳುಗಡೆಯಾಗುವ ಪ್ರದೇಶಗಳಾದ ಕೆ.ಜಿ.ಹಳ್ಳಿಯ ಕಲಾ ರಸ್ತೆಗೆ ಹೊಂದಿಕೊಂಡಂತೆ ಬರುವ ಎಸ್.ಡಬ್ಲ್ಯೂ.ಡಿ ಚರಂಡಿಯಲ್ಲಿನ ಹೂಳಲು ತೆಗೆಯಲು ಎಸ್.ಡಬ್ಲ್ಯೂ.ಡಿ ಶಾಖೆಗೆ ಸೂಚಿಸಲಾಯಿತು.
3. ಸದರಿ ವಾರ್ಡ್‌ನಲ್ಲಿ ಮಳೆ ನೀರಿನಿಂದ ಮುಳುಗಡೆಯಾಗುವ ಪ್ರದೇಶಗಳಾದ ಕೆ.ಜಿ.ಹಳ್ಳಿಯ ಮುಖ್ಯರಸ್ತೆಯಿಂದ ಅಬ್ಬಿಗೆರೆ ಕೆರೆಯವರೆಗೂ ಬರುವ ಎಸ್.ಡಬ್ಲ್ಯೂ.ಡಿ ಚರಂಡಿಯ ಹೂಳಲು ತೆಗೆಯಲು ಎಸ್.ಡಬ್ಲ್ಯೂ.ಡಿ ಶಾಖೆಗೆ ಸೂಚಿಸಲಾಯಿತು.

5) **ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಕುಡಿಯುವ ನೀರು ಕಾಮಗಾರಿಯು ಪೂರ್ಣವಾಗಿ ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಮನೆಗಳ ಸಂಪರ್ಕ ಬಾಕಿ ಇರುತ್ತದೆ.
2. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಒಳಚರಂಡಿ ಕಾಮಗಾರಿಯು ಸುಮಾರು 75% ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಒಳಚರಂಡಿಯ ಮುಖ್ಯ ಪೈಪ್‌ಲೈನ್‌ಗಳನ್ನು ಹಾಕಬೇಕಾಗಿದ್ದು, ಇನ್ನೂ ಬಾಕಿ ಇರುವ 700 ಮ್ಯಾನ್‌ಹೋಲ್‌ಗಳನ್ನು ಅಳವಡಿಸಬೇಕಾಗಿರುತ್ತದೆ ಹಾಗೂ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಿ ಮನೆಗಳಿಗೆ ಸಂಪರ್ಕ ನೀಡುವುದು ಬಾಕಿ ಇರುತ್ತದೆ.

6) **ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೋವಿಡ್ ಪೇಷೆಂಟ್ಸ್‌ಗಳ ಪ್ರೈಮರಿ ಕಾಂಟ್ಯಾಕ್ಟ್ ಮತ್ತು ಹೋಮ್ ಐಸೋಲೇಷನ್‌ನಲ್ಲಿ ಇರುವ ಪೇಷೆಂಟ್ಸ್‌ಗಳ ಟ್ರೇಸಿಂಗ್ ಕಾರ್ಯವನ್ನು ಆನ್‌ಲೈನ್ ಮೂಲಕ ಅಪ್‌ಡೇಟ್ ಮಾಡಲಾಗುತ್ತದೆ.
2. ಪ್ರತಿ ದಿನ ವಾರ್ಡ್ ನಂ.12 ರ ಸಾರ್ವಜನಿಕರಿಗೆ ಎರಡು ಪ್ರದೇಶಗಳಲ್ಲಿ ಸ್ವಾಬ್ ಟೆಸ್ಟ್ ಹಾಗೂ ರ್ಯಾಪಿಡ್ ಟೆಸ್ಟ್‌ಗಳನ್ನು ಮಾಡುತ್ತಿರುವುದಾಗಿ ವೈದ್ಯಾಧಿಕಾರಿಗಳು ತಿಳಿಸಿರುತ್ತಾರೆ.

Scanned with CamScanner

3. ನಮ್ಮ ವಾರ್ಡ್‌ಗೆ ಸಂಬಂಧಿಸಿದಂತೆ ಒಟ್ಟು 8648 ಸ್ವಾಬ್ ಟೆಸ್ಟ್‌ಗಳನ್ನು ಮಾಡಲಾಗಿದ್ದು, ಇದರಲ್ಲಿ ಒಟ್ಟು 682 ಪಾಸಿಟಿವ್ ಕೇಸ್‌ಗಳು ದೃಢಪಟ್ಟಿರುತ್ತವೆ.
4. ಸದರಿ ವಾರ್ಡ್‌ನಲ್ಲಿ ಒಟ್ಟು 68 ಕೇಸ್‌ಗಳು ಹೋಮ್ ಐಸೋಲೇಷನ್ ಮತ್ತು 37 ಕೇಸ್‌ಗಳು ಹಾಸ್ಪಿಟಲೈಷನ್ ಮಾಡಲಾಗಿರುತ್ತದೆ.
5. ಸದರಿ ವಾರ್ಡ್‌ನಲ್ಲಿ ದಿನವೊಂದಕ್ಕೆ 350 ಟೆಸ್ಟ್‌ಗಳನ್ನು ಮಾಡಲು ಟಾರ್ಗೆಟ್ ನೀಡಲಾಗಿದ್ದು, ಅದರಂತೆ ಕ್ರಮಕೈಗೊಳ್ಳಲಾಗುತ್ತಿದೆ.

7) **ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು.**

| ಕ್ರ ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಸಣ್ಣಪ್ಪನ ಲೇಔಟ್ ಅಬ್ಬಿಗೆರೆ & ಚಿಕ್ಕಸಂದ್ರ ವ್ಯಾಪ್ತಿಯಲ್ಲಿ ಬೀದಿದೀಪಗಳನ್ನು ಹಾಕುವ ಬಗ್ಗೆ | ವಾರ್ಡ್ ನಂ.12 ರ ಸಣ್ಣಪ್ಪನ ಲೇಔಟ್ ಅಬ್ಬಿಗೆರೆ & ಚಿಕ್ಕಸಂದ್ರ ವ್ಯಾಪ್ತಿಯಲ್ಲಿ ದುರಸ್ಥಿಯಲ್ಲಿರುವ ಬೀದಿದೀಪಗಳನ್ನು ಗುರುತಿಸಿ ಹೊಸ ಬೀದಿದೀಪಗಳನ್ನು ತುರ್ತಾಗಿ ಅಳವಡಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಉಪವಿಭಾಗ, ಬಿಬಿಎಂಪಿ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಉಪವಿಭಾಗ ಬಿಬಿಎಂಪಿ, |
| 2 | ಎಜಿಬಿ ಬಡಾವಣೆಯ ಮುಖ್ಯರಸ್ತೆ & ಅಡ್ಡರಸ್ತೆಗಳಲ್ಲಿ ಪ್ರತಿದಿನ ಸಂಜೆ ಸೊಳ್ಳೆ ಔಷಧಿಯನ್ನು ಸಿಂಪಡಿಸುವುದು. | ಎಜಿಬಿ ಬಡಾವಣೆಯ ಮುಖ್ಯರಸ್ತೆ & ಅಡ್ಡರಸ್ತೆಗಳಲ್ಲಿ ಪ್ರತಿದಿನ ಸಂಜೆ ಸೊಳ್ಳೆ ಔಷಧಿಯನ್ನು ಸಿಂಪಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಲಯ ರವರಿಗೆ | ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಲಯ |
| 3 | ಕೆ.ಜಿ.ಹಳ್ಳಿಯ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬರುವ ರಾಜಕಾಲುವೆಯ ಬೌಂಡರಿಯನ್ನು ಗುರುತಿಸಿಕೊಡುವ ಬಗ್ಗೆ. | ಕೆ.ಜಿ.ಹಳ್ಳಿಯ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬರುವ ರಾಜಕಾಲುವೆಯ ಬೌಂಡರಿಯನ್ನು ಗುರುತಿಸಿಕೊಡಲು ತಹಸೀಲ್ದಾರ್, ಉತ್ತರ ತಾಲ್ಲೂಕು, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದೆ. | ತಹಸೀಲ್ದಾರ್, ಉತ್ತರ ತಾಲ್ಲೂಕು, ಬೆಂಗಳೂರು |
| 4 | ಕೆ.ಜಿ.ಹಳ್ಳಿಯ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬರುವ ಬಾರ್‌ಗಳಲ್ಲಿ ಬೆಳಿಗಿನ ಜಾವದಿಂದ ಮಧ್ಯ ಮಾರಾಟ ಮಾಡುವುದನ್ನು ಗುರುತಿಸಿ ತಡೆಗಟ್ಟುವ ಬಗ್ಗೆ. | ಕೆ.ಜಿ.ಹಳ್ಳಿಯ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬರುವ ಬಾರ್‌ಗಳಲ್ಲಿ ಬೆಳಿಗಿನ ಜಾವದಿಂದ ಮಧ್ಯ ಮಾರಾಟ ಮಾಡುವುದನ್ನು ಗುರುತಿಸಿ ತಡೆಗಟ್ಟಲು ಪೋಲೀಸ್ ಇನ್ಸ್‌ಪೆಕ್ಟರ್, ಗಂಗಮ್ಮನಗುಡಿ ಪೋಲೀಸ್ ಠಾಣೆ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಪೋಲೀಸ್ ಇನ್ಸ್‌ಪೆಕ್ಟರ್, ಗಂಗಮ್ಮನಗುಡಿ ಪೋಲೀಸ್ ಠಾಣೆ |
| 5 | ಸ್ಯಾನಿಟರಿ ಲೈನ್ ಮತ್ತು ವಾಟರ್ ಲೈನ್‌ಗಳನ್ನು ಅಗೆದಿರುವ ಪ್ರದೇಶಗಳಲ್ಲಿ ಮಳೆಯಿಂದ ಗುಂಡಿಗಳು ಬೀಳುತ್ತಿದ್ದು, ಸದರಿ ಗುಂಡಿಗಳನ್ನು ಮುಚ್ಚಲು ತಿಂಗಳಿಗೆ ಒಂದರಂತೆ ಜೆ.ಸಿ.ಬಿಯನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡು ಕ್ರಮವಹಿಸುವ ಬಗ್ಗೆ | ಸ್ಯಾನಿಟರಿ ಲೈನ್ ಮತ್ತು ವಾಟರ್ ಲೈನ್‌ಗಳನ್ನು ಅಗೆದಿರುವ ಪ್ರದೇಶಗಳಲ್ಲಿ ಮಳೆಯಿಂದ ಗುಂಡಿಗಳು ಬೀಳುತ್ತಿದ್ದು, ಸದರಿ ಗುಂಡಿಗಳನ್ನು ಮುಚ್ಚಲು ತಿಂಗಳಿಗೆ ಒಂದರಂತೆ ಜೆ.ಸಿ.ಬಿಯನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ ರವರಿಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ |

Scanned with CamScanner

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 12 ಶೆಟ್ಟಿಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2/4/2020
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 12 ಶೆಟ್ಟಿಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

:ಪ್ರತಿಯನ್ನು:

**ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.**

1) ಶ್ರೀ ರವಿಕುಮಾರ್, ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿಗಳು, ರವರ ಮಾಹಿತಿಗಾಗಿ ಕಳುಹಿಸಿದೆ.
2) ಶ್ರೀ ಕೆ.ಸಿ. ವೆಂಕಟೇಶ್ (ದೇವೇಗೌಡ್ರು), ಕೆ.ಜಿ.ಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
3) ಶ್ರೀ ರಾಮಕೃಷ್ಣೇಗೌಡ್ರು , ಎ.ಜಿ.ಬಿ. ಬಡಾವಣೆ, ರವರ ಮಾಹಿತಿಗಾಗಿ ಕಳುಹಿಸಿದೆ
4) ಶ್ರೀ ಕೃಷ್ಣಪ್ಪ, ಅಬ್ಬಿಗೆರೆ, ರವರ ಮಾಹಿತಿಗಾಗಿ ಕಳುಹಿಸಿದೆ
5) ಶ್ರೀ ಕೆಂಪೋಬಳಯ್ಯ, ಶೆಟ್ಟಿಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
6) ಶ್ರೀಮತಿ ಲಲಿತಮ್ಮ, ಬಾಬಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ
7) ಶ್ರೀ ರಾಜಣ್ಣ (ಗ್ಯಾಸ್), ಚಿಕ್ಕಸಂದ್ರ, ರವರ ಮಾಹಿತಿಗಾಗಿ ಕಳುಹಿಸಿದೆ
8) ಶ್ರೀಮತಿ ನಾಗವೇಣಿ, ವಿನಾಯಕ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ

**ಅಧಿಕಾರಿಗಳ ಮಾಹಿತಿಗಾಗಿ**

1) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ
6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
7) ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ಕೆಪಿಟಿಸಿಎಲ್ ಸೋಲದೇವನಹಳ್ಳಿ/ಜಾಲಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ
12) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್–5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ

Scanned with CamScanner

13) ಉಪ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ರವರ ಮಾಹಿತಿಗಾಗಿ ಕಳುಹಿಸಿದೆ
14) ವಲಯ ಅರಣ್ಯಾಧಿಕಾರಿ ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
15) ಸಹಾಯಕ ನಿರ್ದೇಶಕರು (ನಗರ ಯೋಜನೆ) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
16) ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ
17) ಸಹಾಯಕ ನಿರ್ದೇಶಕರು (ಪಶುಪಾಲನೆ) ರವರ ಮಾಹಿತಿಗಾಗಿ ಕಳುಹಿಸಿದೆ
18) ಕಲ್ಯಾಣಾಧಿಕಾರಿ (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
19) ತೋಟಗಾರಿಕೆ ಅಧೀಕ್ಷಕರು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
20) ಆರೋಗ್ಯಾಧಿಕಾರಿ/ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.12 ರವರ ಮಾಹಿತಿಗಾಗಿ ಕಳುಹಿಸಿದೆ
21) ಪೋಲೀಸ್ ಇನ್ಸ್‌ಪೆಕ್ಟರ್ ಗಂಗಮ್ಮನಗುಡಿ/ಬಾಗಲಗುಂಟೆ/ಸೋಲದೇವನಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
22) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಂಚಾರಿ) ಜಾಲಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ

Scanned with CamScanner